# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 744(738) |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10.03.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಇತ್ತೀಚಿನ ಸಮೀಕ್ಷೆಯಂತೆ ಎಷ್ಟು ಅಧಿಕೃತ ಮತ್ತು ಅನಧಿಕೃತ ಆಸ್ತಿಗಳನ್ನು ಗುರುತಿಸಲಾಗಿದೆ;<br>(ಜಿಲ್ಲಾವಾರು/ ಪಾಲಿಕೆವಾರು ಮಾಹಿತಿ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿಯ ಅಧಿಕೃತ ಮತ್ತು ಅನಧಿಕೃತ ಆಸ್ತಿಗಳ ಜಿಲ್ಲಾವಾರು/ಪಾಲಿಕೆವಾರು ವಿವರಗಳನ್ನು **ಅನುಬಂಧದಲ್ಲಿ ನೀಡಿದೆ**. |
| ಆ) | ಬಳ್ಳಾರಿ ಪಾಲಿಕೆಯಲ್ಲಿ ಅತಿ ಹೆಚ್ಚು (24,399) ಮತ್ತು ಮಂಗಳೂರು ಪಾಲಿಕೆಯಲ್ಲಿ ಅತಿ ಕಡಿಮೆ (1,378) ಅನಧಿಕೃತ ಆಸ್ತಿಗಳು ಪತ್ತೆಯಾಗಲು ಕಾರಣಗಳೇನು: ಈ ವ್ಯತ್ಯಾಸಕ್ಕೆ ಮಾನದಂಡಗಳೇನಾದರೂ ಬದಲಾಗಿದೆಯೇ; | ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ರಚನೆಗೊಂಡ ಬಡಾವಣೆಗಳು ಮತ್ತು ಕಟ್ಟಡಗಳನ್ನು ಅನಧಿಕೃತ ಆಸ್ತಿಗಳೆಂದು ಪರಿಗಣಿಸಲಾಗಿದ್ದು, ಸದರಿ ಸಂಖ್ಯೆಯು ಪಾಲಿಕೆಯಿಂದ ಗುರುತಿಸಲಾದ ಸಂಖ್ಯೆಯಾಗಿದ್ದು, ಸದರಿ ಸಂಖ್ಯೆಯು ಪಾಲಿಕೆಯಿಂದ ಪಾಲಿಕೆಗೆ ವ್ಯತ್ಯಾಸವಿರುತ್ತದೆ ಈ ವ್ಯತ್ಯಾಸಕ್ಕೆ ಯಾವುದೇ ಮಾನದಂಡಗಳು ಇರುವುದಿಲ್ಲ. |
| ಇ) | ರಾಜ್ಯಾದ್ಯಂತ ಗುರುತಿಸಲಾದ ಸುಮಾರು 4.50 ಲಕ್ಷ ಅನಧಿಕೃತ ಆಸ್ತಿಗಳಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಆಗುತ್ತಿರುವ ಅಂದಾಜು ತೆರಿಗೆ ನಷ್ಟ ಎಷ್ಟು; | ಕರ್ನಾಟಕ ಪೌರಸಭೆಗಳ ಕಾಯ್ದೆ (KMA) 1964 ಹಾಗೂ ಕರ್ನಾಟಕ ಪೌರನಿಗಮಗಳ ಕಾಯ್ದೆ (KMC) 1976 ಕ್ಕೆ ತಿದ್ದುಪಡಿ ತರಲಾಗಿದ್ದು, ಅನಧಿಕೃತ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಇದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಆಸ್ತಿ ತೆರಿಗೆ ಸಂಗ್ರಹಣೆ ಹೆಚ್ಚಳವಾಗುತ್ತಿದೆ. |
| ಈ) | ಇ-ಸ್ವತ್ತು (e-Swathu 2.0) ತಂತ್ರಾಂಶದಲ್ಲಿ ತಾಂತ್ರಿಕ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತಾಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಇ-ಸ್ವತ್ತು ವಿತರಣೆ ವಿಳಂಬವಾಗುತ್ತಿರುವುದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಇಲಾಖೆಯ ಉತ್ತರ:**<br>ಇ-ಸ್ವತ್ತು 2.0 ತಂತ್ರಾಂಶದ Citizen interface ನ ಮೂಲಕ ಅರ್ಜಿಗಳನ್ನು ಅನುಮೋದನೆ ಮಾಡುವಂತಹ ಸಂದರ್ಭದಲ್ಲಿ ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಇ-ಸ್ವತ್ತು 2.0 ತಂತ್ರಾಂಶದ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಇಲಾಖೆಯಿಂದ<br>ಎನ್.ಐ.ಸಿ ರವರೊಂದಿಗೆ ನಿರಂತರವಾಗಿ ಸಮನ್ವಯ ಗೊಳಿಸಲಾಗುತ್ತಿದೆ. ಅದರಂತೆ, ಇ-ಸ್ವತ್ತು 2.0 ತಂತ್ರಾಂಶದಲ್ಲಿ ಬದಲಾವಣೆ ಮಾಡಿ, ಈ ಕೆಳಕಂಡ ಸಮಸ್ಯೆಗಳನ್ನು ಈಗಾಗಲೇ ಬಗೆಹರಿಸಲಾಗಿದೆ.<br>1. ಇ-ಸ್ವತ್ತು ತಂತ್ರಾಂಶದಲ್ಲಿ Citizen interface ಮೂಲಕ ಅರ್ಜಿಗಳನ್ನು ಋಣಭಾರ ಪ್ರಮಾಣಪತ್ರ (Encumbrance Cetificate-EC) ಗಳನ್ನು ಸಲ್ಲಿಸುವಲ್ಲಿ ಉಂಟಾಗುತ್ತಿದ್ದ |

| | | |
|---|---|---|
| | | ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.<br>2. ಇ-ಸ್ವತ್ತು ತಂತ್ರಾಂಶದ Citizen interface ಮೂಲಕ ಅರ್ಜಿಗಳನ್ನು Save ಮಾಡಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.<br>3. ಇ-ಸ್ವತ್ತು ತಂತ್ರಾಂಶದ Citizen interface ಮೂಲಕ ಇ-ಖಾತಾಗಳನ್ನು download ಮಾಡಿಕೊಳ್ಳಲು ಇದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.<br>4. ಇ-ಸ್ವತ್ತು ತಂತ್ರಾಂಶದ Citizen interface ಮೂಲಕ ಅರ್ಜಿಗಳನ್ನು ಸಲ್ಲಿಸುವಾಗ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಮಾಡಲಾಗಿದ್ದ ಸಂಯೋಜನೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.<br>5. ಇ-ಸ್ವತ್ತು ತಂತ್ರಾಂಶದ ಗ್ರಾಮ ಪಂಚಾಯತಿ ಬಳಕೆದಾರರುಗಳ ಲಾಗಿನ್ ನಲ್ಲಿ ಅರ್ಜಿಗಳ ಅನುಮೋದನೆಯಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.<br>6. ಇ-ಸ್ವತ್ತು ತಂತ್ರಾಂಶದ Citizen interface ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಗುಂಟೆ ಮತ್ತು Cents ನಲ್ಲಿರುವ ವಿಸ್ತೀರ್ಣವನ್ನು ಚ.ಮೀ ನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸುವಲ್ಲಿ ಅವಕಾಶ ನೀಡಲಾಗಿದೆ.<br>7. ಇ-ಸ್ವತ್ತು ತಂತ್ರಾಂಶದ Citizen interface ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ.<br>8. ಹೊಸ ಬಡಾವಣೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ. ಈವರೆಗೆ 678 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 139 ಹೊಸ ಬಡಾವಣೆಗಳಿಗೆ ಗ್ರಾಮ ಪಂಚಾಯತಿ ಹಂತದಲ್ಲಿ ಅನುಮೋದನೆ ನೀಡಲಾಗಿದೆ.<br>9. ನಮೂನೆ-11ಬಿ ಖಾತೆಗಳನ್ನು ನಮೂನೆ11ಎ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ.<br>10. ಹೊಸ ಬಹುಮಹಡಿ (ಅಪಾರ್ಟ್ ಮೆಂಟ್) ಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ ನೀಡಲಾಗಿದೆ.<br>11. ನಮೂನೆ-11ಬಿ ಖಾತೆಗಳನ್ನು ಅಪಾರ್ಟ್ ಮೆಂಟ್ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಅಶ ನೀಡಲಾಗಿದೆ. |
| ಉ) | ಅನಧಿಕೃತ ಆಸ್ತಿಗಳನ್ನು ಸಕ್ರಮಗೊಳಿಸಲು ಅಥವಾ ಅವುಗಳಿಂದ ದಂಡ ಸಹಿತ ತೆರಿಗೆ ವಸೂಲಿ ಮಾಡಲು ಸರ್ಕಾರ ಹೊಸ ನೀತಿಯನ್ನು ರೂಪಿಸಿದೆಯೇ ? | ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗಿ ಮಹಾಯೋಜನೆ ಅನುಮೋದನೆಯಾಗಿರುವ ಪ್ರದೇಶಗಳಲ್ಲಿ ದಿನಾಂಕ:19-10-2013ರ ಮುಂಚಿತವಾಗಿ ಬಂದಿರುವ ಎಲ್ಲಾ ತರಹದ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ/556/ಮೈಅಪ್ರಾ/2013(1) ದಿ.28-5-2014 ರಲ್ಲಿ Karnataka Town and Country Planning (Regularisation |

| | | |
|---|---|---|
| | | of unauthorized Development or Construction) Rules 2014 ಅನ್ನು ಜಾರಿಗೆ ತಂದಿರುತ್ತದೆ.<br><br>ಸದರಿ ನಿಯಮಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು SLP(C) No. (s) 956-957/2017 ರಂದು ಮಧ್ಯಂತರ ತಡೆಯಾಜ್ಞೆಯನ್ನು ಮುಂದಿನ ಆದೇಶದವರೆಗೂ ಮುಂದುವರೆಸುವಂತೆ ಆದೇಶ ನೀಡಿರುತ್ತದೆ. ಈ ಕುರಿತು ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪು ಬಂದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು. |

**ಸಂಖ್ಯೆ: ನಅಇ 77 ಎಂಎನ್‌ಇ 2026 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

ಅನುಬಂಧ-01

| ಮಹಾನಗರ ಪಾಲಿವಾರು ಇ-ಖಾತಾ ವರದಿ | | | | |
|---|---|---|---|---|
| **ಕ್ರ.ಸಂ.** | **ಮಹಾನಗರ ಪಾಲಿಕೆ** | **ಅಧಿಕೃತ** | **ಅನಧಿಕೃತ** | **ಒಟ್ಟು** |
| 1 | ಶಿವಮೊಗ್ಗ | 29999 | 2522 | 32521 |
| 2 | ಬೀದರ್ | 28091 | 4672 | 32763 |
| 3 | ವಿಜಯಪುರ | 35548 | 3569 | 39117 |
| 4 | ಬೆಳಗಾವಿ | 35738 | 6306 | 42044 |
| 5 | ಕಲಬುರ್ಗಿ | 37531 | 10772 | 48303 |
| 6 | ತುಮಕೂರು | 39721 | 9056 | 48777 |
| 7 | ರಾಯಚೂರು | 51885 | 2064 | 53949 |
| 8 | ಬಳ್ಳಾರಿ | 32911 | 24435 | 57346 |
| 9 | ಹಾಸನ | 54440 | 2961 | 57401 |
| 10 | ಮಂಗಳೂರು | 56947 | 1384 | 58331 |
| 11 | ಮೈಸೂರು | 55993 | 5576 | 61569 |
| 12 | ದಾವಣಗೆರೆ | 69199 | 15054 | 84253 |
| 13 | ಹುಬ್ಬಳ್ಳಿ-ಧಾರವಾಡ | 136290 | 2795 | 139085 |
| | **ಒಟ್ಟು** | **664293** | **91166** | **755459** |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

## ಜಿಲ್ಲಾವಾರು ಇ-ಖಾತಾ ವರದಿ

| ಕ್ರ.ಸಂ. | ಜಿಲ್ಲೆ | ಅಧಿಕೃತ | ಅನಧಿಕೃತ | ಒಟ್ಟು |
|---|---|---|---|---|
| 1 | ಕೊಡಗು | 20690 | 885 | 21575 |
| 2 | ಚಾಮರಾಜನಗರ | 37765 | 3579 | 41344 |
| 3 | ಉತ್ತರ ಕನ್ನಡ | 38084 | 6104 | 44188 |
| 4 | ಚಿಕ್ಕಬಳ್ಳಾಪುರ | 37858 | 21490 | 59348 |
| 5 | ಮಂಡ್ಯ | 49347 | 10192 | 59539 |
| 6 | ಯಾದಗಿರಿ | 55008 | 9294 | 64302 |
| 7 | ಚಿಕ್ಕಮಗಳೂರು | 60507 | 4317 | 64824 |
| 8 | ರಾಮನಗರ | 52719 | 12943 | 65662 |
| 9 | ಉಡುಪಿ | 66730 | 2280 | 69010 |
| 10 | ಕೋಲಾರ | 59530 | 11355 | 70885 |
| 11 | ಬೀದರ್ | 62913 | 10337 | 73250 |
| 12 | ಬೆಂಗಳೂರು ಗ್ರಾಮಾಂತರ | 56778 | 30769 | 87547 |
| 13 | ವಿಜಯನಗರ | 78153 | 9926 | 88079 |
| 14 | ಬಾಗಲಕೋಟೆ | 75332 | 13758 | 89090 |
| 15 | ಚಿತ್ರದುರ್ಗ | 82134 | 7927 | 90061 |
| 16 | ಹಾವೇರಿ | 87582 | 4861 | 92443 |
| 17 | ಶಿವಮೊಗ್ಗ | 84226 | 9523 | 93749 |
| 18 | ಬೆಂಗಳೂರು ನಗರ | 44808 | 50366 | 95174 |
| 19 | ಬಳ್ಳಾರಿ | 62854 | 33057 | 95911 |
| 20 | ಕಲಬುರ್ಗಿ | 78816 | 18822 | 97638 |
| 21 | ಕೊಪ್ಪಳ | 83438 | 15662 | 99100 |
| 22 | ಹಾಸನ | 101116 | 6309 | 107425 |
| 23 | ಬಿಜಾಪುರ | 103052 | 11410 | 114462 |
| 24 | ತುಮಕೂರು | 87121 | 30611 | 117732 |
| 25 | ಗದಗ | 124458 | 1647 | 126105 |
| 26 | ದಾವಣಗೆರೆ | 106440 | 22635 | 129075 |
| 27 | ದಕ್ಷಿಣ ಕನ್ನಡ | 133035 | 3917 | 136952 |
| 28 | ರಾಯಚೂರು | 140832 | 15830 | 156662 |
| 29 | ಧಾರವಾಡ | 158175 | 4739 | 162914 |
| 30 | ಬೆಳಗಾವಿ | 134598 | 32866 | 167464 |
| 31 | ಮೈಸೂರು | 148763 | 37058 | 185821 |
| | **ಒಟ್ಟು** | **2512862** | **454469** | **2967331** |

ಸಹಾಯಕ ನಿರ್ದೇಶಕರು (ಆಸ್ತಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು